Report

4(2)

## ಕರ್ನಾಟಕ ವಿಧಾನ ಪರಿಷತ್ತು

## ಸರ್ಕಾರಿ ಭರವಸೆಗಳ ಸಮಿತಿ
## (2013-2015)

# ನಲವತ್ತೈದನೆಯ ವರದಿ

ವಿಧಾನ ಪರಿಷತ್ತಿಗೆ ಒಪ್ಪಿಸಿದ ದಿನಾಂಕ: 22/2/2016

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನಸೌಧ, ಬೆಂಗಳೂರು – 560 001

# ಸರ್ಕಾರಿ ಭರವಸೆಗಳ ಸಮಿತಿ

## (2013-2015)

2013-15ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ಕೆಳಕಂಡಂತಿವೆ:

ಸಮಿತಿಯ ರಚನೆ

ಶ್ರೀ ಬಸವರಾಜ ಹೊರಟ್ಟಿ

ಅಧ್ಯಕ್ಷರು

<u>ಸದಸ್ಯರುಗಳು</u>

ಶ್ರೀಯುತರುಗಳಾದ:-

02. ರಾಮಚಂದ್ರಗೌಡ
03. ಡಾ: ಮತ್ತಿಕಟ್ಟಿ ವೀರಣ್ಣ
04. ಎಂ. ಶ್ರೀನಿವಾಸ್
05. ದಯಾನಂದ (ದಿನಾಂಕ: 05.01.2016ರವರೆಗೆ)
06. ಅಶ್ವತ್ ನಾರಾಯಣ
07. ಅಮರನಾಥ ಪಾಟೀಲ್
08. ಟಿ.ಎ. ಶರವಣ
09. ಶರಣಪ್ಪ ಮಟ್ಟೂರು
10. ಬಸವರಾಜ ಪಾಟೀಲ್ ಇಟಗಿ (ದಿನಾಂಕ: 13.01.2016ರಿಂದ)

**<u>ವಿಧಾನ ಪರಿಷತ್ತಿನ ಅಧಿಕಾರಿಗಳು:</u>**

ಶ್ರೀಮತಿ:ಶ್ರೀಯುತರುಗಳಾದ:

| | | |
|---|---|---|
| 1. ವಿ. ಶ್ರೀಶ್ | : | ಕಾರ್ಯದರ್ಶಿ |
| 2. ಶ್ರೀನಿವಾಸ | : | ಅಪರ ಕಾರ್ಯದರ್ಶಿ (ಪ್ರ) |
| 3. ಕೆ.ಎನ್. ಮಂಜುಳ | : | ಜಂಟಿ ಕಾರ್ಯದರ್ಶಿ (ಪ್ರ) |
| 4. ಎಸ್. ನಿರ್ಮಲ | : | ಉಪ ಕಾರ್ಯದರ್ಶಿ (ಪ್ರ) |
| 5. ಬಿ.ಆರ್. ಗಾಯತ್ರಿ | : | ಅಧೀನ ಕಾರ್ಯದರ್ಶಿ |

# ಪೀಠಿಕೆ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ 2013-2015ನೇ ಸಾಲಿನ ಸಮಿತಿಯ 45ನೆಯ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ.

2013-15ನೇ ಸಾಲಿನಲ್ಲಿ ರಚಿಸಲಾದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ದಿ:06.08.2014ರಂದು ನಡೆಸಿ ತದನಂತರ ನಡೆಸಲಾದ ಸಭೆಗಳ ವಿವರ ಕೆಳಕಂಡಂತಿದೆ.

**ಸಭೆಗಳ ವಿವರ ಕೆಳಕಂಡಂತಿದೆ**

| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ದಿನಾಂಕ | ಮುಕ್ತಾಯಗೊಂಡ ಭರವಸೆ | ಪುಟ ಸಂಖ್ಯೆ |
|---|---|---|---|---|
| 01. | ಕಂದಾಯ | 27.08.2014<br>10.06.2015 | 52 | 01 ರಿಂದ 38 |
| 02. | ಹಿಂದುಳಿದ ವರ್ಗಗಳ ಕಲ್ಯಾಣ | 19.05.2015 | 26 | 39 ರಿಂದ 54 |
| 03. | ವಾಣಿಜ್ಯ ಮತ್ತು ಕೈಗಾರಿಕೆ | 18.09.2014 | 17 | 55 ರಿಂದ 75 |
| 04. | ಸಹಕಾರ | 06.11.2014 | 05 | 76 ರಿಂದ 92 |
| 05. | ಉನ್ನತ ಶಿಕ್ಷಣ | 04.09.2014<br>17.06.2015<br>25.08.2015 | 69 | 93 ರಿಂದ 138 |
| 06. | ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳ ಕಾನೂನು ಮಾಪನಶಾಸ್ತ್ರ ಇಲಾಖೆ | 30.09.2015 | 16 | 140 ರಿಂದ 156 |

| | | | | |
|---|---|---|---|---|
| 07. | ಮೂಲಸೌಲಭ್ಯ ಅಭಿವೃದ್ಧಿ | 28.01.2015<br>26.05.2015 | 10 | 157 ರಿಂದ 169 |
| 08. | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ | 26.06.2015 | 03 | 170 ರಿಂದ 174 |
| 09. | ಕನ್ನಡ ಮತ್ತು ಸಂಸ್ಕೃತಿ | 05.05.2015 | 25 | 175 ರಿಂದ 201 |
| 10. | ಕಾರ್ಮಿಕ | 08.04.2015 | 21 | 202 ರಿಂದ 218 |
| 11. | ಜಲಸಂಪನ್ಮೂಲ | 11.09.2014 | 24 | 219 ರಿಂದ 244 |
| 12. | ಸಣ್ಣ ನೀರಾವರಿ | 21.01.2015 | 08 | 245 ರಿಂದ 264 |
| 13. | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 03.06.2015 | 02 | 265 ರಿಂದ 266 |
| 14. | ಲೋಕೋಪಯೋಗಿ | 03.09.2014 | 45 | 267 ರಿಂದ 309 |
| 15. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 07.01.2015 | 05 | 310 ರಿಂದ 315 |
| 16. | ಸಮಾಜ ಕಲ್ಯಾಣ | 16.10.2014 | 22 | 316 ರಿಂದ 338 |
| 17. | ಸಾರಿಗೆ | 01.09.2015 | 36 | 339 ರಿಂದ 369 |
| 18. | ಗೃಹ | 13.11.2014<br>08.09.2015 | 60 | 370 ರಿಂದ 447 |

| | | | | |
|---|---|---|---|---|
| 19. | ವಸತಿ | 22.09.2015 | 17 | 448 ರಿಂದ 474 |
| 20. | ವೈದ್ಯಕೀಯ ಶಿಕ್ಷಣ | 14.10.2015 | 21 | 475 ರಿಂದ 509 |
| 21. | ಯೋಜನೆ ಮತ್ತು ಸಾಂಖ್ಯಿಕ | 26.05.2015 | 01 | 510 |
| 22. | ಪಶುಸಂಗೋಪನೆ ಮತ್ತು ಮೀನುಗಾರಿಕೆ | 14.01.2015 | 20 | 511 ರಿಂದ 527 |
| 23. | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 20.08.2014<br>30.10.2014<br>12.05.2015<br>10.08.2015 | 122 | 528 ರಿಂದ 662 |
| 24. | ಕಾನೂನು | 28.10.2015 | 02 | 663 ರಿಂದ 664 |
| 25. | ನಗರಾಭಿವೃದ್ಧಿ | 13.08.2014<br>21.10.2015 | 92 | 665 ರಿಂದ 787 |
| 26. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 18.12.2015 | 20 | 788 ರಿಂದ 815 |
| 27. | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 04.12.2015<br>28.12.2015 | 12<br>01 | 816 ರಿಂದ 828 |
| 28. | **ಅನುಬಂಧಗಳು** | | | |

ಸಮಿತಿಯು ದೀರ್ಘಕಾಲದ ಅಂದರೆ ಸುಮಾರು 10 **ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿದ್ದ ಭರವಸೆಗಳನ್ನು ಪರಿಶೀಲಿಸಿ ಮುಕ್ತಾಯಗೊಳಿಸಿರುತ್ತದೆ.** ಡಿಸೆಂಬರ್, 2015ರ ಅಂತ್ಯದವರೆಗೆ **ವಸತಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಅಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಒಟ್ಟು 03 ಇಲಾಖೆಗಳಲ್ಲಿ ಬಾಕಿ ಇದ್ದ ಎಲ್ಲಾ ಭರವಸೆಗಳನ್ನು ಸರ್ಕಾರ**

**ಈಡೇರಿಸಿದುದರಿಂದ ಸದರಿ ಭರವಸೆಗಳನ್ನು ಮುಕ್ತಾಯಗೊಳಿಸಿದ್ದು,** ಪ್ರಸ್ತುತ ಭರವಸೆಗಳು ಶೂನ್ಯವಾಗಿರುತ್ತದೆ. ನನ್ನ 36 ವರ್ಷಗಳ ಅನುಭವದಲ್ಲಿ ಯಾವ ಇಲಾಖೆಯಲ್ಲೂ ಇಲ್ಲಿಯವರೆಗೆ ಭರವಸೆಗಳು ಶೂನ್ಯವಾದ ನಿದರ್ಶನಗಳು ಇಲ್ಲವೆಂಬುದು ನನ್ನ ಅನಿಸಿಕೆ. ಇದಕ್ಕೆ ಸಮಿತಿಯ ಸದಸ್ಯರು ಹಾಗೂ ಇಲಾಖೆಯ ಅಧಿಕಾರಿಗಳು ಪಟ್ಟ ಶ್ರಮ ಅಪಾರವಾಗಿರುತ್ತದೆ. ಇದಕ್ಕೆ ಸಮಿತಿಯ ಇಚ್ಛಾ ಶಕ್ತಿಯೇ ಕಾರಣವೆಂದು ಹೇಳಲು ಸಂತೋಷವೆನಿಸುತ್ತದೆ. ಒಟ್ಟಾರೆಯಾಗಿ 37 ಸಭೆಗಳಲ್ಲಿ 27 ಇಲಾಖೆಗಳ 1679 ಭರವಸೆಗಳನ್ನು ಚರ್ಚಿಸಿ 764 ಭರವಸೆಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಮೇಲ್ಕಂಡ ದಿನಾಂಕಗಳಲ್ಲಿ ನಡೆದ ಸಮಿತಿಯ ಸಭೆಗಳಿಗೆ ಹಾಜರಾಗಿ ಸಮಿತಿಗೆ ಬೇಕಾದಂತಹ ಅವಶ್ಯಕ ಮಾಹಿತಿಗಳನ್ನು ಒದಗಿಸಿದ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಸಮಿತಿಯ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ಮತ್ತು ವಿಧಾನ ಪರಿಷತ್ತಿನ ಕಾರ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ಸಮಿತಿಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು.
ದಿನಾಂಕ: 22.02.2016

**ಬಸವರಾಜ ಹೊರಟ್ಟಿ**
**ಅಧ್ಯಕ್ಷರು**
ಸರ್ಕಾರಿ ಭರವಸೆಗಳ ಸಮಿತಿ

# ಮುನ್ನುಡಿ

ವಿಧಾನ ಪರಿಷತ್ತಿನಲ್ಲಿ ಸದಸ್ಯರು ಪ್ರಶ್ನೆಗಳು/ಸೂಚನೆಗಳು/ವಿಧೇಯಕದ ಮೇಲೆ ಚರ್ಚೆ/ನಿಯಮ-72/ನಿಯಮ 330/ಶೂನ್ಯವೇಳೆ ಪ್ರಸ್ತಾವದ ಮೂಲಕ ಪ್ರಸ್ತಾಪಿಸುವ ಪ್ರಮುಖ ವಿಷಯಗಳಿಗೆ ಸಂಬಂಧಪಟ್ಟಂತೆ ಸದನದಲ್ಲಿ ಕಾಲಕಾಲಕ್ಕೆ ಮಂತ್ರಿಗಳು ಉತ್ತರಿಸುವಾಗ ನೀಡಿರುವ ಭರವಸೆ/ಆಶ್ವಾಸನೆ/ವಾಗ್ದಾನವನ್ನು ನೀಡುವುದು ರೂಢಿಯಲ್ಲಿರುತ್ತದೆ. ಅಂತಹ ಭರವಸೆಗಳು/ಆಶ್ವಾಸನೆಗಳು/ವಾಗ್ದಾನಗಳು ಎಷ್ಟರಮಟ್ಟಿಗೆ ಸರ್ಕಾರದಿಂದ ಕಾರ್ಯಗತವಾಗಿದೆ, ಕಾರ್ಯಗತವಾಗಿದ್ದರೆ, ಆ ಉದ್ದೇಶಕ್ಕಾಗಿ ಅಗತ್ಯವಾದ ಕನಿಷ್ಟ ಅವಧಿಯಲ್ಲಿ ಕಾರ್ಯಗತವಾಗಿದೆಯೇ ಎಂಬುದನ್ನು ಪರಿಶೀಲಿಸಿ ಸದನಕ್ಕೆ ವರದಿ ನೀಡಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 260ರ ರೀತ್ಯಾ ಸರ್ಕಾರಿ ಭರವಸೆಗಳ ಸಮಿತಿಯು ರಚನೆಗೊಂಡಿರುತ್ತದೆ.

ಸದನದಲ್ಲಿ ನೀಡಲಾಗಿರುವ ಭರವಸೆಗಳನ್ನು ಕಾರ್ಯಗತಗೊಳಿಸಲು ಸಮಿತಿಯು ಸಂಬಂಧಪಟ್ಟ ಇಲಾಖೆಗಳಿಗೆ **3 ತಿಂಗಳ** ಅವಧಿಯನ್ನು ಗೊತ್ತುಪಡಿಸಿರುತ್ತದೆ. ಆದರೆ, ಈವರೆವಿಗೂ ಯಾವುದೇ ಭರವಸೆಗಳು ನಿಗದಿತ **03 ತಿಂಗಳ** ಅವಧಿಯಲ್ಲಿ **ಈಡೇರಿಸಿರುವ ನಿದರ್ಶನವಿರುವುದಿಲ್ಲ**. ಭರವಸೆಗಳನ್ನು ಕಾರ್ಯಗತಗೊಳಿಸಲು ಇರುವ ತಾಂತ್ರಿಕ ತೊಂದರೆಗಳನ್ನು ಇಲಾಖಾ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸಮಿತಿಯು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

ಸದನವು ನಡೆಯುವ ಸಂದರ್ಭದಲ್ಲಿ ಮಂತ್ರಿಗಳು ನೀಡುವ ಆಶ್ವಾಸನೆಗಳನ್ನು ಸಂಬಂಧಪಟ್ಟ ಇಲಾಖಾಧಿಕಾರಿಗಳು ಕ್ರೋಢೀಕರಿಸಿ, ಮಾಹಿತಿ ಪಡೆದು ಭರವಸೆಗಳ ಕಾರ್ಯಗತಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಮೂರು ತಿಂಗಳೊಳಗಾಗಿ ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಆದರೆ, ಅನುಭವದಲ್ಲಿ ಸಮಿತಿಯು ಸಭೆ ಕರೆದಾಗ ಮಾತ್ರ ಭರವಸೆಗಳ ಕಡೆಗೆ ಇಲಾಖಾಧಿಕಾರಿಗಳು ಗಮನ ಹರಿಸುತ್ತಿರುವುದು ಕಂಡು ಬಂದಿರುತ್ತದೆ. ಈ ಪ್ರವೃತ್ತಿಯಿಂದ ಬಹಳ ವರ್ಷಗಳಾದರೂ ಸಹ ಭರವಸೆಗಳು

ಭರವಸೆಗಳಾಗಿಯೇ ಉಳಿಯಲು ಮುಖ್ಯ ಕಾರಣವಾದರೆ, ಮಂತ್ರಿಗಳು ಮಾನ್ಯ ಸದಸ್ಯರ ಪ್ರಶ್ನೆಗಳು/ಸೂಚನೆಗಳಿಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸುವ ಸಂದರ್ಭದಲ್ಲಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗದೇ ಇರುವಂತಹ ವಿಷಯಗಳಿಗೂ ಸಹ ಸಮಯೋಚಿತವಾಗಿ ಆಶ್ವಾಸನೆಗಳನ್ನು ನೀಡುತ್ತಿರುವಂತಹ ಪರಿಪಾಠವನ್ನು ಬೆಳೆಸಿಕೊಂಡು ಬರುತ್ತಿರುವುದರಿಂದ ಸದನದಲ್ಲಿ ನೀಡಲಾದ ಭರವಸೆಗಳನ್ನು ಕಾರ್ಯರೂಪಕ್ಕೆ ತರಲು ಆಗದೆ ಇರುವ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಮನಗಂಡು, ಸಮಿತಿಯು ಮಾನ್ಯ ಸದಸ್ಯರುಗಳು ಸದನದಲ್ಲಿ ಕೇಳತಕ್ಕಂಥ ಪ್ರಶ್ನೆಗಳು/ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸುವ ಪೂರ್ವದಲ್ಲಿ ಇಲಾಖಾಧಿಕಾರಿಗಳೊಂದಿಗೆ ಸಾಧಕ-ಬಾಧಕಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಾಕಷ್ಟು ಪರಿಶೀಲಿಸಿ ಕಾರ್ಯರೂಪಕ್ಕೆ ತರಬಹುದಾದಂತಹ ಹಾಗೂ ಅವರ ಕಾರ್ಯವ್ಯಾಪ್ತಿಗೆ ಒಳಪಡುವ ವಿಷಯಗಳಿಗೆ ಮಾತ್ರ ಆಶ್ವಾಸನೆಗಳನ್ನು ನೀಡುವುದು ಸೂಕ್ತವೆಂದು ಭಾವಿಸುತ್ತದೆ. ಇದರ ಜೊತೆಗೆ ದೀರ್ಘಕಾಲ ಭರವಸೆಗಳು ಬಾಕಿ ಉಳಿಯುವುದರಿಂದ ಆಶ್ವಾಸನೆ ನೀಡುವ ಸರ್ಕಾರ ಮತ್ತು ಜಾರಿಗೊಳಿಸುವ ಸರ್ಕಾರಗಳು ಬೇರೆ ಬೇರೆಯಾಗಿ ಅವುಗಳ ನಿಲುವುಗಳು ಸಹ ಬೇರೆ ಬೇರೆಯಾಗುವುದರಿಂದ ಭರವಸೆಗಳನ್ನು ಈಡೇರಿಸಲು ಅಸಾಧ್ಯವಾಗುತ್ತದೆ. ಇದರಿಂದಾಗಿ ಸದನದಲ್ಲಿ ಸಚಿವರು ನೀಡಿದ ಆಶ್ವಾಸನೆಗಳಿಗೆ ಪ್ರಾಮುಖ್ಯತೆ ಮತ್ತು ಪಾವಿತ್ರ್ಯತೆ ಇಲ್ಲದಂತಾಗುತ್ತದೆ ಎಂಬುದಾಗಿ ಸಮಿತಿಯು ಅಭಿಪ್ರಾಯಪಡುತ್ತದೆ. ಸದನಕ್ಕೆ ಮಂತ್ರಿಗಳು ಉತ್ತರ ಕೊಡುವಾಗ ಅಧಿಕಾರಿಗಳು ಕೊಟ್ಟಿರುವಂತಹ ಅಂಕಿ ಅಂಶಗಳಿಗೂ ಅದೇ ಅಧಿಕಾರಿಗಳು ಸಭೆಗೆ ನೀಡಿರುವಂತಹ ಅಂಕಿ ಅಂಶಗಳಿಗೆ ಅಗಾಧವಾದ ವ್ಯತ್ಯಾಸವಿರುತ್ತದೆ. ಕೆಲ ಮಂತ್ರಿಗಳು, ಇಚ್ಛಾನುಸಾರ ಉತ್ತರ ಕೊಡುವುದುಂಟು. ಬಹಳಷ್ಟು ಅಧಿಕಾರಿಗಳು ಸಮಿತಿ ಸಭೆಗಳನ್ನು ಗಂಭೀರವಾಗಿ ಪರಿಗಣಿಸದೆ ಮತ್ತು ಮಾಮೂಲಿ ಸಭೆಯೆಂದು ಭಾವಿಸಿ ಸಭೆಯಲ್ಲಿ ಪೂರ್ಣವಾದ ಮಾಹಿತಿ ಇಲ್ಲದೆ ಕೆಳಹಂತದ ಅಧಿಕಾರಿಗಳಿಗೆ ಉತ್ತರ ಕೊಡಲು ಹೇಳುವ ಪದ್ಧತಿ ಮಾಮೂಲಾಗಿದೆ. ಪ್ರಧಾನ ಕಾರ್ಯದರ್ಶಿಗಳೇ ಉತ್ತರ ಕೊಡಬೇಕೆಂಬ ನಿಯಮವಿದ್ದರೂ ಅದರ ಬಗ್ಗೆ ಚಿಂತನೆಯನ್ನು ಮಾಡುವುದಿಲ್ಲ. ಆದುದರಿಂದ ಸಭೆಗಳಿಗೆ ಪೂರ್ವಾಭಾವಿ ಸಭೆ ನಡೆಸಿ ಇತ್ತೀಚಿನ

ಮಾಹಿತಿಯನ್ನು ಪಡೆದುಕೊಳ್ಳದೆ ಹಿಂದಿನ ಸಮಿತಿ ಸಭೆಗಳಿಗೆ ನೀಡಿದ್ದ ಮಾಹಿತಿಯನ್ನೇ ಪುನರ್ ಉಚ್ಛರಿಸಿ ನೀಡುತ್ತಿರುವ ಪ್ರವೃತ್ತಿಯ ಬಗ್ಗೆ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿ, ಈ ವಿಷಯದ ಬಗ್ಗೆ ಎಷ್ಟು ಸಾರಿ ಮುಖ್ಯಕಾರ್ಯದರ್ಶಿಗಳಿಗೂ ಸಹ ಪತ್ರ ಬರೆಯಲಾಗಿದೆ.

ಪ್ರತಿ ವಾರಕ್ಕೊಮ್ಮೆ ಒಂದೊಂದು ಇಲಾಖೆಗಳ ಬಾಕಿ ಭರವಸೆಗಳನ್ನು ಸಮಿತಿಯು ಚರ್ಚೆಗೆ ತೆಗೆದುಕೊಂಡಿದ್ದು, ಈ ಬಗ್ಗೆ ಪೂರ್ವಭಾವಿಯಾಗಿ 15 ದಿನಗಳಿಗೂ ಮೇಲ್ಪಟ್ಟು ಒಂದೊಂದು ಸಾರಿ ಒಂದು ತಿಂಗಳವರೆಗೆ ಸಮಯವನ್ನು ನೀಡಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಸಭೆ ನಿಗದಿಗೊಳಿಸಿರುವ ಬಗ್ಗೆ ಅರೆ ಸರ್ಕಾರಿ ಪತ್ರಗಳನ್ನು ಬರೆದಿದ್ದಾಗ್ಯೂ, ನಿಗದಿತ ಅವಧಿಯಲ್ಲಿ ಉತ್ತರವನ್ನು ಒದಗಿಸುವಲ್ಲಿ ಹಾಗೂ ಸಭೆಯಲ್ಲಿ ಕೋರಲಾದ ಪೂರಕ ಮಾಹಿತಿಗಳನ್ನು ನೀಡುವಲ್ಲಿ ಕೆಲವೊಂದು ಇಲಾಖಾಧಿಕಾರಿಗಳು ವಿಫಲಗೊಂಡಿದ್ದರಿಂದ ಸಭೆಗಳ ಕಾರ್ಯಕಲಾಪ ನಡೆಸಲು ಸಾಧ್ಯವಾಗದೆ ಸಭೆಯನ್ನು ಮುಂದೂಡಿದಂತಹ ಪ್ರಸಂಗಗಳು ಉದ್ಭವಗೊಂಡಿದ್ದರ ಬಗ್ಗೆ ಸಮಿತಿಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ. ಅಧಿಕಾರಿಗಳು ಸಭೆಗೆ ಹಾಜರಾಗುವ ಮುನ್ನ ಪೂರ್ವಭಾವಿ ಸಭೆಗಳನ್ನು ನಡೆಸದೆ ಅಪೂರ್ಣ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವ ಪ್ರವೃತ್ತಿಯೇ ಇದಕ್ಕೆ ಕಾರಣ ಎಂದು ಸಭೆಯು ಅಭಿಪ್ರಾಯಪಟ್ಟಿರುತ್ತದೆ. ಹಾಗೆಯೇ, ಕೆಲವೊಂದು ಹಿರಿಯ ಅಧಿಕಾರಿಗಳು ಸಭೆಯ ಪೂರ್ವಾನುಮತಿ ಪಡೆಯದೆ ಸಮಿತಿ ಸಭೆಗಳಿಗೆ ಗೈರುಹಾಜರಾಗಿದ್ದ ಬಗ್ಗೆಯೂ ಸಮಿತಿಯು ಆಕ್ಷೇಪ ವ್ಯಕ್ತಪಡಿಸಿರುತ್ತದೆ. ಇಂತಹ ಪ್ರವೃತ್ತಿಯು ಸಮಿತಿಗೆ ತೋರಿದ ಅಗೌರವವೆಂದು ಪರಿಗಣಿಸಿ ಇಲಾಖಾಧಿಕಾರಿಗಳಲ್ಲಿ ಇಂತಹ ನಡವಳಿಕೆಗಳು ಹಾಗೂ ಪ್ರಕರಣಗಳು ಮರುಕಳಿಸಲು ಆಸ್ಪದ ನೀಡದಂತೆ ಸಾಮಾಜಿಕ ಕಳಕಳಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂಬ ಆಶಯದೊಂದಿಗೆ ಮೇಲ್ಕಂಡ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಮಿತಿಯು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿ/ನೌಕರರುಗಳ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಕೋರಿ ಸಮಿತಿ ಅಧ್ಯಕ್ಷನಾಗಿ ನಾನೇ ಬರೆದ ಪತ್ರವನ್ನು ಒಳಗೊಂಡಂತೆ 03 ಬಾರಿ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ

ಮುಖ್ಯಕಾರ್ಯದರ್ಶಿಗಳು ನೆಪಕ್ಕೆ ಒಂದು ಪತ್ರ ಬರೆದು ಯಾವುದೇ ನಿರ್ದಿಷ್ಠ ಕ್ರಮ ಕೈಗೊಳ್ಳದೆ ಸರ್ಕಾರಿ ಕೆಲಸ ಮಾಡಿದ್ದಾರೆ. ಹೀಗಾದರೆ ನಾವು ಯಾವ ರೀತಿಯಲ್ಲಿ ಸಭೆ ನಡೆಸಬೇಕು, ಇದಕ್ಕೆ ಯಾರು ಹೊಣೆ? ಒಂದು ಸಭೆ ನಡೆಸಲು ಸರ್ಕಾರಕ್ಕೆ ಲಕ್ಷಾಂತರ ರೂ.ಗಳ ಖರ್ಚು ಬರುತ್ತದೆ, ಆದರೆ ಸಭೆ ಸರಿಯಾಗಿ ನಡೆಯದೇ ಮುಂದೂಡಿದಲ್ಲಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟ ಉಂಟಾಗುತ್ತದೆ. ಈ ಬಗ್ಗೆ ಇಲಾಖಾಧಿಕಾರಿಗಳಗೂ ಸಹ ಕಾಳಜಿಯುಳ್ಳವರಾಗಿ ಶ್ರಮ ವಹಿಸಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬುದು ನನ್ನ ಅನಿಸಿಕೆ. ಈ ದಿಸೆಯಲ್ಲಿ ಸರ್ಕಾರಕ್ಕೂ ಸಹ ನಾವು ವಿನಂತಿಸುವುದೇನೆಂದರೆ ತೆರಿಗೆ ಕೊಡುವ ಜನರ ಬಗ್ಗೆ ಮತ್ತು ರಾಜ್ಯದ ಜನ ಸಾಮಾನ್ಯರಿಗೆ ನಾವು ನ್ಯಾಯ ಕೊಡುತ್ತೇವೆಯೇ ಎಂಬ ಪ್ರಶ್ನೆ ಬಂದಾಗ ನಮ್ಮ ಮನಸ್ಸಿಗೆ ನೋವಾಗುತ್ತದೆ. ಇದಕ್ಕೆ ಪರಿಹಾರವೇನು? ಈ ಎಲ್ಲ ಪ್ರಶ್ನೆ ಬಂದಾಗ ನಾವು ನಿಸ್ಸಾಯಕರಾಗುತ್ತೇವೆ. ಆದ್ದರಿಂದ ಸರ್ಕಾರವು ಇದಕ್ಕೆ ಸ್ಪಷ್ಟವಾದ ಒಂದು ತೀರ್ಮಾನ ಮಾಡಬೇಕು; ಇಲ್ಲದಿದ್ದರೆ, ಆಡಳಿತ ಯಂತ್ರ ದಿನದಿಂದ ದಿನಕ್ಕೆ ಕುಸಿಯುತ್ತಾ ಹೋದರೆ, ಮುಂದಿನ ಗತಿ ಏನು ಎನ್ನುವುದನ್ನು ನಾವೆಲ್ಲರೂ ಒಂದು ಸಾರಿ ಆತ್ಮಾವಲೋಕನ ಮಾಡಬೇಕು.

ಪ್ರತಿಯೊಂದು ಇಲಾಖೆಯಲ್ಲಿಯೂ ಕೋಟಿ ಕೋಟಿ ಹಣ ದುರುಪಯೋಗ ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರದ ಪ್ರಕರಣಗಳು ನಡೆದಿರುವುದು ಸ್ಪಷ್ಟವಾಗಿ ಕಂಡುಬಂದಿದ್ದರೂ ವರ್ಷಾನುಗಟ್ಟಲೆ ತನಿಖೆ ಕೈಗೊಳ್ಳುವಲ್ಲಿ ವಿಳಂಬ ನೀತಿಯನ್ನು ಅನುಸರಿಸಿ ಆರೋಪಿತ ಅಧಿಕಾರಿ/ನೌಕರರ ಕರ್ತವ್ಯ ನಿರ್ಲಕ್ಷ್ಯತನ ಇದ್ದಾಗ್ಯೂ ಶಿಕ್ಷೆಯಿಂದ ಪಾರಾಗುತ್ತಿರುವ/ದೋಷಮುಕ್ತರಾಗುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಬಹುತೇಕ ಪ್ರಕರಣಗಳಲ್ಲಿ ನಿಗದಿತ ಅವಧಿಯೊಳಗೆ ಇಲಾಖಾ ವಿಚಾರಣೆ ಕೈಗೊಳ್ಳದಿರುವುದು, ಇಲಾಖಾ ವಿಚಾರಣೆಯ ಪ್ರಗತಿ ಮಂದಗತಿಯಲ್ಲಿ ಸಾಗುತ್ತಿರುವುದು, ಆರೋಪ ಸಾಬೀತಾದ ತಪ್ಪಿತಸ್ಥ ಅಧಿಕಾರಿ / ನೌಕರರು ರಕ್ಷಣೆ ಪಡೆಯಲು ಕೆ.ಎ.ಟಿ. ಹಾಗೂ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಪಡೆಯುತ್ತಿರುವುದು, ಕೆ.ಎ.ಟಿ ಮತ್ತು ನ್ಯಾಯಾಲಯದಲ್ಲಿ ಇರುವಂತಹ ಪ್ರಕರಣಗಳಲ್ಲಿ ಇಲಾಖೆಯಿಂದ ಸೂಕ್ತವಾದ ಮಾಹಿತಿಯನ್ನು ಒದಗಿಸದೆ ತಡೆಯಾಜ್ಞೆಯನ್ನು ತೆರವುಗೊಳಿಸುವಲ್ಲಿ ವರ್ಷಾನುಗಟ್ಟಲೆ ವಿಳಂಬ

ನೀತಿಯನ್ನು ಅನುಸರಿಸುತ್ತಿರುವುದರಿಂದ ಅಂತಹ ಅಧಿಕಾರಿ / ನೌಕರರು ನಿವೃತ್ತಿ ಹೊಂದಿ ಸರ್ಕಾರದ ಎಲ್ಲಾ ಸವಲತ್ತು / ಪಿಂಚಣಿ ಸೌಲಭ್ಯಗಳನ್ನು ಪಡೆದು ನಿವೃತ್ತಿ ಹೊಂದುತ್ತಿರುವಂತಹ ಪದ್ಧತಿಯ ಬಗ್ಗೆ ಸಮಿತಿಯು ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ. ಅಲ್ಲದೆ ಕೋಟ್ಯಾಂತರ ರೂ.ಗಳ ದುರುಪಯೋಗ / ಭ್ರಷ್ಟಾಚಾರದಲ್ಲಿ ತೊಡಗಿದಂತಹ ಅಧಿಕಾರಿ / ನೌಕರರುಗಳು ಇಲಾಖೆ ವಿಚಾರಣೆಯಲ್ಲಿ ದೋಷಮುಕ್ತರಾಗುತ್ತಿರುವುದು ಇಲ್ಲವೇ ವಾಗ್ದಂಡನೆ ಮತ್ತು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿದಿರುವಂತಹ ಕನಿಷ್ಠ ಶಿಕ್ಷೆಗೆ ಒಳಗಾಗಿರುವುದು ಅಲ್ಲದೆ ಅಮಾನತ್‌ನಲ್ಲಿಟ್ಟಂತಹ ಅಧಿಕಾರಿ / ನೌಕರರುಗಳನ್ನು ಪುನ: ಅದೇ ಕಚೇರಿಯ ಅದೇ ಸ್ಥಳದಲ್ಲಿ ಮುಂದುವರೆಯಲು ಅವಕಾಶ ಮಾಡಿಕೊಟ್ಟಿರುವ ಪ್ರಸಂಗಗಳ ಬಗ್ಗೆಯೂ ಸಹ ಸಮಿತಿಯು ತನ್ನ ಬೇಸರವನ್ನು ವ್ಯಕ್ತಪಡಿಸಿರುತ್ತದೆ. ಬಹುತೇಕ ಪ್ರಕರಣಗಳನ್ನು ತನಿಖೆಗೆ ಲೋಕಾಯುಕ್ತಕ್ಕೆ ವಹಿಸಲಾಗಿದ್ದು, ಅಲ್ಲಿಯೂ ಸಹ 10 ವರ್ಷಗಳಾದರು ಇತ್ಯರ್ಥಗೊಳ್ಳದೆ ತನಿಖೆಯು ವಿಳಂಬವಾಗಿರುವುದು ಬಹಳ ಸ್ಪಷ್ಟವಾಗಿ ಕಂಡು ಬಂದಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಲೋಕಾಯುಕ್ತ ನಿಬಂಧಕರು (Register) ಸಭೆಗೆ ಕರೆದು ಸ್ಪಷ್ಟಪಡಿಸಲಾಗಿದೆ. ಇಂತಹ ಘಟನೆಗಳು ಸಮಿತಿಯ ಗಮನಕ್ಕೆ ಬಂದಾಗ ಇಲಾಖಾ ವಿಚಾರಣೆ ನಡೆಸುವ ಜೊತೆಯಲ್ಲಿಯೇ ಕ್ರಿಮಿನಲ್ ಮೊಕದ್ದಮೆಯನ್ನು ಸಹ ಹೂಡಬೇಕೆಂದು ಹಾಗೂ ಆರೋಪಿತ ಅಧಿಕಾರಿ / ನೌಕರರುಗಳು ನಿವೃತ್ತಿ ಸೌಲಭ್ಯಗಳನ್ನು ಪಡೆದು ನಿವೃತ್ತಿ ಹೊಂದಲು ಸಹಕರಿಸಿ ಸರ್ಕಾರಕ್ಕೆ ಕೋಟಿಗಟ್ಟಲೆ ಆರ್ಥಿಕ ನಷ್ಟ ಉಂಟು ಮಾಡುವುದರ ಜೊತೆಗೆ ತಪ್ಪಿತಸ್ಥರು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಹ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸಲಹೆಯನ್ನು ನೀಡಿರುತ್ತದೆ.

ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರ ಹಾಗೂ ಅಧಿಕಾರ ದುರುಪಯೋಗ ಪ್ರಕರಣಗಳು ಸದನದಲ್ಲಿ ಪ್ರಸ್ತಾಪವಾಗುವವರೆಗೂ ಇಲಾಖಾಧಿಕಾರಿಗಳ ಗಮನಕ್ಕೆ ಏಕೆ ಬರುವುದಿಲ್ಲ? ಇಲಾಖಾ ಮೇಲಾಧಿಕಾರಿಗಳು ಈ ಬಗ್ಗೆ ಸದನದಲ್ಲಿ ಪ್ರಶ್ನಿಸುವ ಪೂರ್ವದಲ್ಲಿಯೇ

ಗಮನಹರಿಸಿ ಕ್ರಮ ಕೈಗೊಳ್ಳಲು ಪ್ರಯತ್ನಿಸಬೇಕು. ಇದಲ್ಲದೆ ಬಹುತೇಕ ಪ್ರಕರಣಗಳಲ್ಲಿ ಭರವಸೆ ಸಮಿತಿ ಸಭೆಯ ದಿನಾಂಕವನ್ನು ನಿಗಧಿಪಡಿಸಿದ ನಂತರ ಕ್ರಮ ಜರುಗಿಸಲು ಪ್ರಾರಂಭ ಮಾಡುತ್ತಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ.

ರಾಜ್ಯವು ಬರದ ವಿಕೋಪಕ್ಕೆ ಸಿಲುಕಿದ್ದ ಹಿನ್ನೆಲೆಯಲ್ಲಿ ಸರ್ಕಾರವು ಆರ್ಥಿಕ ಮಿತವ್ಯಯ ಸಾಧಿಸುವ ಉದ್ದೇಶದಿಂದ ಸಮಿತಿಯು ಸದರಿ ಸಾಲಿನಲ್ಲಿ ವಿದೇಶ ಹಾಗೂ ಹೊರ ರಾಜ್ಯದಲ್ಲಿಯೂ ಪ್ರವಾಸವನ್ನು ಕೈಗೊಂಡಿರುವುದಿಲ್ಲ. ಜಲಸಂಪನ್ಮೂಲ ಮತ್ತು ನಗರಾಭಿವೃದ್ಧಿ ಇಲಾಖೆಯ ಭರವಸೆಗಳ ಪರಿಶೀಲನೆ ಸಂಬಂಧ ಗುಲ್ಬರ್ಗಾಕ್ಕೆ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ ಭರವಸೆ ಬಗ್ಗೆ ಚರ್ಚಿಸಲು ಹೊರ ರಾಜ್ಯವಾದ ತಿರುಪತಿ-ತಿರುಮಲಕ್ಕೆ ಖುದ್ದು ಭೇಟಿ ನೀಡಿರುತ್ತದೆ.

2013-15ನೇ ಸಾಲಿನಲ್ಲಿ ರಚಿಸಲಾದ ಭರವಸೆಗಳ ಸಮಿತಿಯು ಒಟ್ಟಾರೆ **27 ಇಲಾಖೆಗಳಿಗೆ** ಸಂಬಂಧಿಸಿದಂತೆ ಒಟ್ಟು 37 ಸಭೆಗಳನ್ನು ನಡೆಸಿ, **1679** ಭರವಸೆಗಳನ್ನು ಸರ್ಕಾರದಿಂದ ನೀಡಲಾದ ಉತ್ತರದ ಮೇರೆಗೆ ಇಲಾಖಾಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸಿ 764 ಭರವಸೆಗಳನ್ನು ಮುಕ್ತಾಯಗೊಳಿಸಿರುತ್ತದೆ. ಇಲಾಖಾ ವತಿಯಿಂದ ಭರವಸೆಗಳನ್ನು ತೀವ್ರಗತಿಯಲ್ಲಿ ಈಡೇರಿಸಲು ಸಮಿತಿಯು ಆಗಿಂದಾಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಾ ಸದರಿ ಭರವಸೆಗಳು ಈಡೇರಿಸಿದ ನಂತರ ಮುಕ್ತಾಯಗೊಳಿಸುತ್ತಿದ್ದು, ಪ್ರಸ್ತುತ **03 ಇಲಾಖೆಗಳಲ್ಲಿ** ಬಾಕಿ ಇದ್ದ ಭರವಸೆಗಳನ್ನು ಪೂರ್ತಿಯಾಗಿ ಈಡೇರಿಸಿದ್ದರಿಂದ ಎಲ್ಲಾ ಭರವಸೆಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಬಹುಶ: ವಿಧಾನ ಪರಿಷತ್ತಿನ ಇತಿಹಾಸದಲ್ಲೇ ಇದು ಪ್ರಥಮ ಬಾರಿಗೆ 3 ಇಲಾಖೆಗಳ ಭರವಸೆಗಳು ಶೂನ್ಯ ಸ್ಥಿತಿಯಲ್ಲಿದೆ ಎಂದರೆ ತಪ್ಪಾಗಲಾರದು. ಕಾರ್ಯಾಂಗ ಹಾಗೂ ಶಾಸಕಾಂಗವು ಒಟ್ಟಾಗಿ ರಾಜ್ಯದ ಅಭಿವೃದ್ಧಿಯನ್ನು ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸಿದಲ್ಲಿ ಯಶಸ್ಸು ಖಂಡಿತ.

ಕೆಲವೊಮ್ಮೆ ಸಮಿತಿಯ ಅಧ್ಯಕ್ಷನಾದ ನಾನು ನನ್ನ ಸಹಪಾಠಿಗಳಿಗೂ ಮುಜುಗರ ಮಾಡಿರುವುದು ಉಂಟು. ಸಮಿತಿಯಲ್ಲಿ ಎಲ್ಲಾ ಸದಸ್ಯರುಗಳು ಹೆಚ್ಚು ಸಮಯವನ್ನು ವ್ಯರ್ಥ ಮಾಡದೇ ಒಂದು ಉತ್ತಮ ಗುಣಮಟ್ಟದ ಚರ್ಚೆಯಲ್ಲಿ ಪಾಲ್ಗೊಂಡು ಅವರ ಸಲಹೆ ಸಹಕಾರಗಳನ್ನು ನೀಡಿರುತ್ತಾರೆ. ಇದಕ್ಕೆ ನಾನು ಅವರೆಲ್ಲರಿಗೂ ತುಂಬಾ ಋಣಿಯಾಗಿರುತ್ತೇನೆ. ನಾವು ಸರ್ಕಾರದ ಅಂಗವಾಗಿ ನಮ್ಮ ಕರ್ತವ್ಯಗಳನ್ನು ನಿಸ್ವಾರ್ಥತೆಯಿಂದ ನಿರ್ವಹಿಸಿರುತ್ತೆವೆಂಬ ಸಮಾಧಾನ ನಮಗಿದೆ. ಸಾರ್ವಜನಿಕರ ಹಿತಾಸಕ್ತಿಗನುಗುಣವಾಗಿ ಸರ್ಕಾರದ ಹಣ ಹಾಗೂ ಸದಸ್ಯರುಗಳ ಅಮೂಲ್ಯವಾದ ಸಮಯವನ್ನು ವ್ಯರ್ಥಗೊಳಿಸದೆ ಇಲಾಖೆಯ ಆಡಳಿತ ಯಂತ್ರವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಶಾಯಿ ವರ್ಗದವರಲ್ಲಿ ಕರ್ತವ್ಯ ನಿಷ್ಠೆ ಹಾಗೂ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವುದೇ ಸಮಿತಿಯ ಉದ್ದೇಶ. ಈ ನಿಟ್ಟಿನಲ್ಲಿ ಸಮಿತಿ ಸಭೆಗಳಲ್ಲಿ ಸಹಕರಿಸಿದಂತಹ ಅಲ್ಲದೆ ವಿಶೇಷವಾಗಿ ಎಲ್ಲಾ ಬಾಕಿ ಭರವಸೆಗಳನ್ನು ಈಡೇರಿಸಿರುವ ಸಂಬಂಧಪಟ್ಟ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಅಧಿಕಾರಿಗಳಿಗೂ ಸಹ ಸಮಿತಿಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

**45ನೇ ಕರಡು ವರದಿಯನ್ನು ದಿನಾಂಕ: 22.02.2016 ರಂದು ನಡೆದ ಸಮಿತಿಯ ಸಭೆಯಲ್ಲಿ ಅಂಗೀಕರಿಸಲಾಗಿರುತ್ತದೆ.**

ಬೆಂಗಳೂರು.
ದಿನಾಂಕ: 22.02.2016

**ಬಸವರಾಜ ಹೊರಟ್ಟಿ**
ಅಧ್ಯಕ್ಷರು
ಸರ್ಕಾರಿ ಭರವಸೆಗಳ ಸಮಿತಿ